**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 1354/2025**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ06**

**ದಿನಾಂಕಃ 29.10.2025** **ಸಿಡಬ್ಲ್ಯೂ08**

| | |
|---|---|
| ಹೆಸರು | ಉಮೇಶ |
| ತಂದೆ ಹೆಸರು | ಬಸಪ್ಪ |
| ವಯಸ್ಸು | 37 ವರ್ಷ |
| ಉದ್ಯೋಗ | ಗ್ರೇಡ್ 1- ಕಾರ್ಯದರ್ಶಿ |
| ವಾಸ ಸ್ಥಳ | ಹರಪನಹಳ್ಳಿ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು 2020 ರಿಂದ ಇಲ್ಲಿಯವರೆಗೆ ಭಾನುವಳ್ಳಿ ಗ್ರಾಮ ಪಂಚಾಯ್ತಿಯಲ್ಲಿ ಗ್ರೇಡ್ 1- ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 10.12.2024 ರಂದು ಮಲೆಬೆನ್ನೂರು ಠಾಣೆಯ ಪೊಲೀಸರು ಬಾನುವಳ್ಳಿ ಗ್ರಾಮದ ಚಂದ್ರಗುತ್ತೆಮ್ಮ ವೃತ್ತ, ಅದರ ಮುಂಭಾಗ ಇರುವ ವೃತ್ತದ ಮತ್ತು ಲಕ್ಷ್ಮಪ್ಪನವರ ಸ್ವತ್ತಿನ ದಾಖಲೆಗಳನ್ನು ಕೇಳಿದ್ದರು. ನಮ್ಮ ಕಚೇರಿಯಲ್ಲಿ ದಾಖಲೆಗಳನ್ನು ಪರಿಶೀಲಿಸಿದಾಗ ಲಕ್ಷ್ಮಪ್ಪನವರ ಹೆಸರಿಗೆ ಒಂದು ದಾಖಲೆ ಸಿಕ್ಕಿದ್ದು ಅದರಂತೆ ಅದರ ದೃಡೀಕೃತ ನಕಲನ್ನು ಪೊಲೀಸರಿಗೆ ನೀಡಿರುತ್ತೇವೆ. ಸಾಕ್ಷಿಯು ಗುರುತಿಸಿದ ಪತ್ರ ಮತ್ತು ದಾಖಲೆಯನ್ನು (ಡಿಸಿಬಿ ರಿಜಿಸ್ಟರ್) ಕ್ರಮವಾಗಿ ನಿಪಿ.10 ಮತ್ತು ನಿಪಿ.11 ಎಂದು ಸಾಕ್ಷಿಯ ಸಹಿಯನ್ನು ನಿಪಿ.10 (ಎ) ಮತ್ತು 11(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಪಿ ಎಸ್ ಜೆ ವಕೀಲರಿಂದಃ**

ನಿಪಿ.11 ನ್ನು ಪ್ಲೆಕ್ಸ ವಿಚಾರವಾಗಿ ನೀಡಿರುತ್ತೇನೆ ಅಂದರೆ ಚಂದ್ರಗುತ್ತೆಮ್ಮ ಸರ್ಕಲ್ ವಿವಾದಿತ ಜಾಗವಾಗಿದ್ದು ಸದರಿ ಜಾಗದಲ್ಲಿ ಪ್ಲೆಕ್ಸ ಹಾಕಿರುವ ವಿಚಾರವಾಗಿ ಗಲಾಟೆ ನಡೆದಿದ್ದು, ಈ ಹಿಂದೆಯೂ ಈ ರೀತಿ ಗಲಾಟೆಗಳು ನಡೆಯುತ್ತಿದ್ದವು. ಆದಕಾರಣ ದಾಖಲೆಗಳನ್ನು ನೀಡಿರುತ್ತೇನೆ. ಬ್ಯಾನರ್ ಎಷ್ಟು ದಿನದಂದ ಸದರಿ ಜಾಗೆಯಲ್ಲಿ ಇತ್ತು ಎಂದು ನನಗೆ ಹೇಳಲು ಬರುವುದಿಲ್ಲ. ಪ್ಲೆಕ್ಸಗಳನ್ನು ಹಾಕಲು ಪಂಚಾಯ್ತಿಯಿಂದ ಪರವಾನಿಗೆ ಪಡೆಯಬೇಕು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆದರೆ ಪ್ಲೆಕ್ಸ ಹಾಕಿದವರು ಯಾವುದೇ ಪರವಾನಿಗೆ ಪಡೆದಿಲ್ಲ ಎಂದು ನುಡಿಯುತ್ತಾರೆ. ಸದರಿ ಪ್ಲೆಕ್ಸನ್ನು ಯಾರು ಹಾಕಿರುತ್ತಾರೆ ಮತ್ತು ಏಕೆ ಹಾಕಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ಪಂಚಾಯ್ತಿಯಿಂದ ಪರವಾನಿಗೆ

ಪಡೆಯದೇ ಪ್ಲೆಕ್ಸ ಹಾಕಿದವರ ವಿರುದ್ಧ ಕ್ರಮ ತೆಗೆದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಪಿಡಿಒ ರವರು ಪ್ಲೆಕ್ಸ ಹಾಕಿದವರಿಗೆ ಮೌಖಿಕವಾಗಿ ಪ್ಲೆಕ್ಸ ಹಾಕಬೇಡಿ ಎಂದು ಹೇಳಿದರು. ಸದರಿಯವರು ಯಾರು ಎಂದು ನನಗೆ ಗೊತ್ತಿಲ್ಲ. ಸದರಿಯವರು ಯಾರು ಎಂದು ಪಿಡಿಒ ರವರಿಗೆ ಮಾಹಿತಿ ಇದೆಯಾ ಅಥವಾ ಇಲ್ಲ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಬಾನುವಳ್ಳಿ ಗ್ರಾಮದಲ್ಲಿ ಯಾವುದೇ ಮತ ಅಥವಾ ಜನಾಂಗದ ಪ್ಲೆಕ್ಸಗಳನ್ನು ಹಾಕಬಾರದು ಎಂದು ನಿಷೇದಾಜ್ಞೆ ಇದೆ ಎಂದರೆ ಸರಿ. ಘಟನಾ ಸ್ಥಳದಲ್ಲಿ ಯಾವುದೇ ಬ್ಯಾನರ್ ಅಥವಾ ಪ್ಲೆಕ್ಸ ಹಾಕದಿದ್ದರೂ ಸಹ ಚಾಸಾ.1 ರವರೊಂದಿಗೆ ಮಿಲಾಪೆಯಾಗಿ ಸುಳ್ಳು ದಾಖಲೆ ನೀಡಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ